ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 47/2022**

ಪ್ರಾ.ಸಾ. **:-1**

ಪ್ರಮಾಣೀಕರಿಸಲಾದ ದಿನಾಂಕಃ**- 14.07.2026**

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

ಅಪಘಾತದ ಸಂಬಂಧ ವಿಮೆ ಪರಿಹಾರ ಪಡೆದಿರುತ್ತೇವೆ ಎಂದರೆ ಸರಿ. ಚಾ.ಸಾ-2 ನನಗೆ ಪರಿಚಯವಿಲ್ಲ. ಚಾ.ಸಾ-2 ಪರಿಚಯವಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ-4 ರವರು ನನ್ನ ತಂದೆ ಚಾಲನೆ ಮಾಡುತ್ತಿದ್ದ ಸ್ಕೂಟರಿನ ಮಾಲೀಕರು ಎಂದರೆ ಸರಿ. ನನ್ನ ತಂದೆಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸುಳ್ಳು, ಅದನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ. ನನ್ನ ತಂದೆಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸುಳ್ಳು. ಅಪಘಾತವಾದಂತಹ ರಸ್ತೆ ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಗೊತ್ತಿಲ್ಲ. ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತವಾದ ದಿನವೇ ದೂರು ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನಾನು ನನ್ನ ತಂದೆಯನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದೆ ಎನ್ನುತ್ತಾರೆ.

ಅಪಘಾತವಾದ ಸ್ಥಳಕ್ಕೆ ನಾನು ಸುಮಾರು 9.45 ರ ಸಮಯಕ್ಕೆ ಹೋಗಿರುತ್ತೇನೆ. ಆ ಸಮಯದಲ್ಲಿ 2 ವಾಹನಗಳೂ ಸ್ಥಳದಲ್ಲಿದ್ದವು. ನನಗೆ ಚಾ.ಸಾ-2 ರವರು 9.30 ರ ಸಮಯಕ್ಕೆ ಅಪಘಾತದ ಬಗ್ಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಚಾ.ಸಾ-2 ರವರ ದೂರವಾಣಿ ಸಂಖ್ಯೆ ನೆನಪಿಲ್ಲ. ಕಾರಿನ ಮುಂಭಾಗ ಹಾಗೂ ಸ್ಕೂಟರಿನ ಹ್ಯಾಂಡೆಲ್ ಮತ್ತು ಇತರೇ ಭಾಗಗಳು ಜಖಂ ಆಗಿದ್ದವು. ಅಪಘಾತವಾದ ಸ್ಥಳ ಸರ್ಕಲ್ ಆಗಿದ್ದು, ಅಲ್ಲಿ 4 ರಸ್ತೆಗಳು ಕೂಡುತ್ತವೇ ಎಂದರೆ ಸರಿ. ಸ್ಥಳದಲ್ಲಿ ಬಾಲಾಜಿ ಹೋಟೆಲ್ ಅಲ್ಲದೇ ಇನ್ನು 2 ಹೋಟೆಲ್ ಗಳಿವೆ ಎಂದರೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಕಾರಿನ ಚಾಲಕ ಸ್ಥಳದಲ್ಲಿದ್ದರು, ನಾನು ಅವರನ್ನು ನೋಡಿರುತ್ತೇನೆ.

ಪೊಲೀಸರು ಮಹಜರ್ ಬರೆಬೇಕೆಂದು ಲಿಖಿತ ನೋಟೀಸ್ ನೀಡಿಲ್ಲ, ದೂರವಾಣಿ ಕರೆ ಮಾಡಿ ಹೇಳಿದ್ದರು. ಮಹಜರನ್ನು ಪೊಲೀಸರು ಬರೆದಿದ್ದು, ಮಹಜರಿಗೆ ಸಹಿ ಮಾಡಿಲ್ಲ, ಸಾಕ್ಷಿದಾರರ ಹೆಸರುಗಳು ನೆನಪಿಲ್ಲ. ವಾಹನಗಳಿಗೆ ಜಖಂ ಆದ ಬಗ್ಗೆ ಪೊಲೀಸರು ಬರೆದಿರುವ ಬಗ್ಗೆ ಬರೆದಿಲ್ಲ. ನಾನು ಸಹಿಯನ್ನು ಪೊಲೀಸ್ ಠಾಣೆಯ ಬಳಿ ಮಾಡಿರುತ್ತೇನೆ ಎಂದರೆ ಸುಳ್ಳು.

ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಿರ್ಲಕ್ಷ್ಯತನದಿಂದ ಅಪಘಾತ ಆಗದಿದ್ದರೂ ವಿಮೆ ಪರಿಹಾರದ ಸಲುವಾಗಿ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ವಾಹನ ಅಪಘಾತಪಡಿಸಿದ್ದು, ಆರೋಪಿ ಸ್ಥಳದಲ್ಲಿದ್ದ ಕಾರಣ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೃತರ ವಿಮೆ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**